# ಸುರೆಯ ಕತೆ

‘ಪ್ರತಿದಿನವೂ ಬೆಂಕಿ ಉರಿಯುತ್ತಲೇ ಇದೆ. ಎಷ್ಟು ಸಂತೋಷ, ಎಷ್ಟು ಆನಂದ! ಅಂಧಕಾರದಲ್ಲಿ ಮುಳುಗಿದ್ದರೂ ದೀಪವನ್ನು ಹುಡುಕರು’. ಇದು ‘ಧಮ್ಮಪದ’ದಲ್ಲಿ ಬರುವ ಒಂದು ಶ್ಲೋಕದ ಸಾರ. ಜಾತಕ ಕತೆಗಳಲ್ಲಿ ಬರುವ ಒಂದು ಕತೆ ‘ಕುಂಭ ಜಾತಕ’. ಕೋವಾತುರಾಸಿ ಮುನಿಗಳು ಜೇತವನದಲ್ಲಿ ಉಳಿದಿರುವಾಗ ಅವರನ್ನು ನೋಡಲೆಂದು ವಿಶಾಖಾ ಸಖಿಯರೊಂದಿಗೆ ಹೋಗುತ್ತಾಳೆ. ಆ ಸಖಿಯರು ಶ್ರಾವಸ್ತಿಯಲ್ಲಿ ನಡೆದ ಮದಿರೋತ್ಸವದಲ್ಲಿ ಅಮಲಿನಲ್ಲಿ ತೂರಾಡುತ್ತಿದ್ದವರು. ಮುನಿಗಳು ಮದಿರೆಯನ್ನು ಕುರಿತು ಈ ಮೇಲಿನ ಶ್ಲೋಕವನ್ನು ಹೇಳುತ್ತಾರೆ. ವಿಶಾಖಾ ಮುನಿಗಳಿಗೆ ‘ಭಂತೆ, ನಾಚಿಕೆ ಮತ್ತು ಭಯಗಳನ್ನು ಇಲ್ಲದಂತೆ ಮಾಡುವ ಈ ಸುರಾಪಾನವು ಯಾವಾಗಿನಿಂದ ಆರಂಭವಾಯಿತು’ ಎಂದು ಕೇಳುತ್ತಾಳೆ. ಆಗ ಮುನಿಗಳು ಕುಂಭ ಜಾತಕದ ಕತೆ ಹೇಳುತ್ತಾರೆ.

ಸುರ, ಅಸುರ, ಸುರೆ ಈ ಪದಗಳು ದೇವತೆಗಳು, ರಾಕ್ಷಸರು ಹಾಗೂ ಅವರಿಗೆ ಪರಮ ಪ್ರಿಯವಾದ ಸುರಾಪಾನ ಕುರಿತು ಕೇಳಿದ್ದೇವೆ. ವೈದಿಕರು ಯಜ್ಞಕುಂಡಕ್ಕೆ ಅರ್ಪಿಸುತ್ತಿದ್ದ ಸುರೆ ಮತ್ತು ಮಾಂಸದ ಪ್ರಸ್ತಾಪಗಳೂ ಕೇಳಿಬರುತ್ತವೆ. ಸ್ವರ್ಗದಲ್ಲಿ ಅಪ್ಸರೆಯರ ನೃತ್ಯ ಹಾಗೂ ಮದಿರೆ ಸೇವನೆಯ ಬಗ್ಗೆ ವರ್ಣರಂಜಿತ ಕತೆಗಳನ್ನು ಪುರಾಣಗಳು ಕಟ್ಟಿಕೊಟ್ಟಿವೆ. ಚರಿತ್ರೆಯಲ್ಲಿ ಅರಸರ ಪಾನಗೋಷ್ಠಿ ಹಾಗೂ ಜನಸಾಮಾನ್ಯರ ಗಡಂಗುಗಳ ಕತೆಗಳನ್ನು ಕೇಳುತ್ತ ಬಂದಿದ್ದೇವೆ.

ದ್ರಾಕ್ಷಿ ಹಣ್ಣಿನಿಂದ ಮದ್ಯವನ್ನು ಮಾಡುವುದನ್ನು ಕಂಡುಹಿಡಿದ ಗ್ರೀಕ್‌ನ ಡಯೋನೈಸಿಸನ್ನು ಮದ್ಯದ ದೇವತೆಯೆಂದೇ ಕರೆಯಲಾಗುತ್ತದೆ. ಜ್ಯೂಸ್ ಅವರ ಪ್ರಧಾನದೇವತೆ. ಜ್ಯೂಸ್ ಮತ್ತು ಅವನ ಸುತ್ತ ಇರುವ ಪ್ರಣಯದ ಕತೆಗಳು ಅಗಣಿತ. ಡಯೋನಿಸಸ್ ಜ್ಯೂಸ್ ಮತ್ತು ಸೆಮಲಿಯರ ಮಗ. ತಾಯಿ ಸತ್ತಾಗ ತಂದೆಯ ತೊಡೆಯಿಂದಲೇ ಜನಿಸಿದವನು. ಮದ್ಯದ ದೇವತೆ, ಫಲವಂತಿಕೆಯ ದೈವ, ಅಮಲಿನ ದೇವತೆ, ಕೊನೆಗೆ ಮನುಕುಲಕ್ಕಾಗಿ ಪ್ರಾಣಾರ್ಪಣೆ ಮಾಡುವ ದೇವಪುತ್ರನೆಂದು ಅವನನ್ನು ಕಾಣಲಾಗಿದೆ. ಹೋದಕಡೆಯಲ್ಲೆಲ್ಲಾ ಜನರಿಗೆ ದ್ರಾಕ್ಷಾಮದ್ಯ ಮಾಡುವುದನ್ನು ಕಲಿಸಿಕೊಟ್ಟ ಅವನಿಗೆ ಅಭಿಮಾನಿಗಳು ಅಸಂಖ್ಯಾತರಿದ್ದರು. ಡಯೋನೈಸಸ್ ಮದ್ಯಕ್ಕೆ ದೇವತೆಯಾಗಿದ್ದಂತೆ ಸಂಗೀತಕ್ಕೂ, ನೃತ್ಯಕ್ಕೂ ದೇವತೆಯಾಗಿದ್ದ. ಭಕ್ತರು ಹಿಡಿಯುವ ದಂಡಕೋಲೇ ಅವನ ಲಾಂಛನವಾಗಿದ್ದು ಅದಕ್ಕೆ ದ್ರಾಕ್ಷಾಬಳ್ಳಿಯನ್ನು ಸುತ್ತಲಾಗಿತ್ತು.

ಡಯೋನೈಸಸ್‌ನನ್ನು ಒಮ್ಮೆ ಕಡಲ್ಗಳ್ಳರು ಅಪಹರಿಸುತ್ತಾರೆ. ವೇಗವಾಗಿ ಚಲಿಸುತ್ತಿದ್ದ ಹಡಗು ಇದ್ದಕ್ಕಿದ್ದಂತೆ ನಿಂತುಬಿಡುತ್ತದೆ. ಏನಾಯಿತೆಂದು ಎಲ್ಲರೂ ಬೆಡಗಿನಿಂದ ನೋಡುವಷ್ಟರಲ್ಲಿ ಹಡಗಿನಿಂದ ಸುವಾಸನೆಯುಳ್ಳ ದ್ರಾಕ್ಷಾರಸ ಪ್ರವಾಹದಂತೆ ಹರಿಯಲಾರಂಭಿಸುತ್ತದೆ. ಹಡಗಿನ ತುಂಬಾ ದ್ರಾಕ್ಷಿಯ ಬಳ್ಳಿಗಳು ಹಬ್ಬತೊಡಗುತ್ತವೆ. ಡಯೋನೈಸಸ್ ತಲೆಯ ಮೇಲೆ ದ್ರಾಕ್ಷಿ ಬಳ್ಳಿಗಳೊಂದಿಗೆ, ಅವನ ದಂಡಕ್ಕೆ ಸುತ್ತಿದ ದ್ರಾಕ್ಷಿ ಬಳ್ಳಿಗಳೊಂದಿಗೆ ಕಾಣಿಸಿಕೊಳ್ಳುತ್ತಾನೆ. ಡಯೋನೈಸಸ್ ಹಡಗಿನ ನಾವಿಕರನ್ನೆಲ್ಲ ಡಾಲ್ಫಿನ್‌ಗಳನ್ನಾಗಿ ಮಾಡುತ್ತಾನೆ. ಹೀಗೆ ಗ್ರೀಕ್ ಪೌರಾಣಿಕ ಕತೆಗಳಲ್ಲಿ ದ್ರಾಕ್ಷಾರಸದ ದೈವವನ್ನು ಅವನ ಲೀಲೆಗಳೊಂದಿಗೆ ವರ್ಣಿಸಲಾಗುತ್ತದೆ.

ವಿಶಾಖಾ ಕೇಳಿದ ಸುರಾಪಾನವು ಯಾವಾಗಿನಿಂದ ಆರಂಭವಾಯಿತು ಎಂಬ ಪ್ರಶ್ನೆಗೆ ಕೋವಾತುರಾಸಿ ಮುನಿಗಳು ‘ಕುಂಭ ಜಾತಕ’ವೆಂಬ ಕತೆಯನ್ನು ಹೇಳುತ್ತಾರೆ. ವಾರಣಾಸಿಯಲ್ಲಿ ಬ್ರಹ್ಮದತ್ತನೆಂಬ ಅರಸ ಆಳುತ್ತಿದ್ದಾಗ ಸುರನೆಂಬ ಕಾಡುಮನುಷ್ಯ ಹಿಮಾಲಯದಿಂದ ಕೆಲವು ಸಾಮಗ್ರಿಗಳನ್ನು ತರಲು ಹೋಗುತ್ತಾನೆ. ಅಲ್ಲಿ ದೊಡ್ಡ ಮರದ ಬುಡದಲ್ಲಿದ್ದ ಹಂಡೆಯ ಆಕಾರದಲ್ಲಿದ್ದ ದೊಡ್ಡ ಹಳ್ಳವನ್ನು ಕಾಣುತ್ತಾನೆ. ಮಳೆ ಬಂದು ಅದರ ತುಂಬ ನೀರು ಹಾಗೂ ಆ ನೀರಿನಲ್ಲಿ ನೆಲ್ಲಿ, ಮೆಣಸು, ಅರಿಶಿನ ಫಲಗಳನ್ನು ಕಾಣುತ್ತಾನೆ. ಅಲ್ಲಿಗೆ ಹಾರಿಬಂದ ಪಕ್ಕಿಗಳು, ಪ್ರಾಣಿಗಳು ದಾಹದಿಂದ ಆ ಹಳ್ಳದ ನೀರನ್ನು ಕುಡಿದು ಮೂರ್ಛೆ ಹೋಗುವುದನ್ನು ಕಾಣುತ್ತಾನೆ. ಸ್ವಲ್ಪ ಹೊತ್ತಿನ ನಂತರ ಎದ್ದು ಉತ್ಸಾಹದಿಂದ ಹಾರಾಡುವುದನ್ನು, ಓಡಾಡುವುದನ್ನು ಕಾಣುತ್ತಾನೆ. ‘ಈ ನೀರು ವಿಷವಂತೂ ಅಲ್ಲ. ಇವು ಕುಡಿದು ಮಲಗುತ್ತವೆ, ಉತ್ಸಾಹದಿಂದ ಓಡಾಡುತ್ತವೆ ಎಂದರೆ ಇದರಲ್ಲಿ ಏನೋ ರಹಸ್ಯವಿದೆ, ಪರೀಕ್ಷಿಸಿ ನೋಡೋಣ’ ಎಂದು ತಾನೂ ಸಹ ಕುಡಿಯುತ್ತಾನೆ. ಕುಡಿದ ನಂತರ ಅಮಲೇರುತ್ತದೆ. ಮಾಂಸವನ್ನು ತಿನ್ನಬೇಕೆಂದೆನಿಸಿ ಅಲ್ಲಿನ ಪಕ್ಷಿಗಳನ್ನು ಕೊಂದು ಸುಟ್ಟು ತಿನ್ನುತ್ತಾನೆ. ಖುಷಿಯಿಂದ ಜೀವನ ನಡೆಸಬಹುದೆಂದು ಯೋಚಿಸಿ ಅಲ್ಲೇ ಕೆಲವು ದಿನ ಕಳೆಯುತ್ತಾನೆ. ಅಲ್ಲಿಯೇ ದೂರದಲ್ಲಿದ್ದ ತನ್ನ ಸ್ನೇಹಿತನಾದ ವರುಣ ಎಂಬ ತಪಸ್ವಿಗೆ ತಾನು ಕಂಡುಹಿಡಿದ ಅಮಲಿನ ಪೇಯವನ್ನು ಕುಡಿಸಿ, ಪಕ್ಷಿಗಳ ಮಾಂಸವನ್ನು ತಿನ್ನಿಸುತ್ತಾನೆ. ಸುರ ಮತ್ತು ವರುಣ ಈ ಪೇಯವನ್ನು ಕಂಡುಹಿಡಿದಿದ್ದರಿಂದ ಇದನ್ನು ಸುರಾ ಮತ್ತು ವಾರುಣೀ ಎಂದು ಕರೆಯಲಾಯಿತು ಎಂಬ ಮಾತುಗಳು ಕೇಳಿಬರುತ್ತವೆ.

ಮುಂದೆ ಜೀವನೋಪಾಯಗಳಿಲ್ಲದ ಇವರಿಬ್ಬರು ಬಿದಿರಿನ ಕೊಳವೆಯಲ್ಲಿ ಮದ್ಯವನ್ನು ನಗರಕ್ಕೆ ತಂದು ಮಾರಿ ಜೀವನ ನಡೆಸಲು ಆರಂಭಿಸುತ್ತಾರೆ. ಮೊದಲು ಪ್ರಜೆಗಳಿಗೆ, ನಂತರ ಅರಸನಿಗೆ ಅಮಲಿನ ರುಚಿ ಹತ್ತಿಸುತ್ತಾರೆ. ಅದರ ಬೇಡಿಕೆ ಹೆಚ್ಚಾದಾಗ ಮತ್ತೆ, ಮತ್ತೆ ಹಿಮಾಲಯಕ್ಕೆ ಹೋಗಲಾರದ ಅವರು ಹಲವು ಪದಾರ್ಥಗಳನ್ನು ಒಂದೆಡೆ ಸೇರಿಸಿ, ಕೊಳೆಸಿ ತಾವೇ ಉತ್ಪಾದಿಸಲಾರಂಭಿಸುತ್ತಾರೆ.

ಶ್ರಾವಸ್ತಿಯ ರಾಜ ಸರ್ವಮಿತ್ರ ಅದರ ಅಮಲಿಗೆ ಮನಸೋತು ಪ್ರಜೆಗಳು, ಮಂತ್ರಿಗಳೊಂದಿಗೆ ಕುಡಿಯಲಾರಂಭಿಸುತ್ತಾನೆ. ಆಡಳಿತ ಹಳಿ ತಪ್ಪಿ ಅರಾಜಕತೆ ವ್ಯಾಪಿಸುತ್ತದೆ. ಸ್ವತಃ ದೇವೇಂದ್ರನೇ ಅವನನ್ನು ಎಚ್ಚರಿಸಲೆಂದು ಬ್ರಾಹ್ಮಣನ ವೇಷ ಧರಿಸಿ ಕೈಯಲ್ಲೊಂದು ಗಡಿಗೆ ಹಿಡಿದು ಸರ್ವಮಿತ್ರನಲ್ಲಿಗೆ ಬರುತ್ತಾನೆ. ಗಡಿಗೆಯಲ್ಲೇನಿದೆ ಎಂದು ಸರ್ವಮಿತ್ರ ಪ್ರಶ್ನಿಸುತ್ತಾನೆ. ಆಗ ದೇವೇಂದ್ರ ಇದು ಜೇನುತುಪ್ಪದ ಗಡಿಗೆಯಲ್ಲ. ಇದನ್ನು ಕುಡಿದವನ ಚಿತ್ತ ಅವನ ವಶದಲ್ಲಿರದು. ಇದನ್ನು ಕುಡಿದವನು ತಾಯಿ ತಂದೆಯರನ್ನು, ಹೆಂಡತಿ ಮಕ್ಕಳನ್ನು ಗೌರವಿಸುವುದನ್ನು ಮರೆಯುತ್ತಾನೆ. ಗುರು ಹಿರಿಯರನ್ನು ಮರೆಯುತ್ತಾನೆ. ನಿರ್ಲಜ್ಜನಾಗಿ ಸಮಾಜದಿಂದ ಬಾಹಿರನಾಗುತ್ತಾನೆ. ಮದ್ಯವನ್ನು ಕುಡಿದು ದೇವತೆಗಳು ನಿರ್ಲಜ್ಜರಾಗಿ ಭೂಮಿಗೆ ಬಿದ್ದರು. ಇಂತಹ ಮದ್ಯದ ಗಡಿಗೆಯನ್ನು ತೆಗೆದುಕೋ ಎಂದ ಸರ್ವಮಿತ್ರನಿಗೆ ಹೇಳುತ್ತಾನೆ.

ಅಮಲಿನ ಜಗತ್ತಿನಿಂದ ವಿವೇಕದ ಕಡೆಗೆ ನಡೆದ ಆ ಅರಸ ತನ್ನ ಕೇಡನ್ನು ಕಂಡು ಅದನ್ನು ತಿದ್ದಿಕೊಳ್ಳುತ್ತಾನೆ. ಈ ಕತೆಯಲ್ಲಿ ಅರಸನಾಗಿದ್ದವನು ಆನಂದ ಹಾಗೂ ದೇವೇಂದ್ರನಾಗಿದ್ದವನು ಬುದ್ಧನಾದ ನಾನೇ ಎಂದು ಮುನಿಗಳು ಕತೆಯನ್ನು ಮುಗಿಸುತ್ತಾರೆ.

ಕೇಡೆಂಬುದು ಎಲ್ಲ ಕಾಲಕ್ಕೂ ಕೇಡೇ ಆಗಿರುತ್ತದೆ. ಯುದ್ಧ, ಕುಡಿತ, ಮಾರಕ ರೋಗಗಳು ಎಲ್ಲ ಕಾಲದಲ್ಲೂ ಇದ್ದವು ಮತ್ತು ಇರುತ್ತವೆ. ಆಯಾ ಕಾಲಕ್ಕೆ ತಕ್ಕಂತೆ ಅವು ತಮ್ಮ ಸ್ವರೂಪವನ್ನು ಬದಲಿಸುತ್ತಿರುತ್ತವೆ. ಹೀಗಿದ್ದಾಗ ಮಾನವರಾದ ನಾವು ಅದರ ಬದಲಾಗುವ ರೂಪಗಳನ್ನು ಅರಿಯುತ್ತಲೇ ಇರಬೇಕು. ಕೇಡಿನಿಂದ ಹೊರಬರುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿರಲೇಬೇಕು.

■ **ಅಮೃತಮತಿ**

## ಮಾತೇ ಮುತ್ತು

- ಸಾಲ ಮಾಡಲು ಬೇಡ, ಸಾಲದೆಂದೆನಬೇಡ.

—ಪುರಂದರದಾಸ

- ಪ್ರೇಮ–ದ್ವೇಷ ಎರಡೂ ಬುದ್ಧಿಗೆ ಕವಿಯುವ ಮಂಕು.

—ರೂಸೋ

- ಪ್ರಾಮಾಣಿಕನಾದವನು ಎಲ್ಲೂ ಇಲ್ಲ ಎನ್ನುವವನಿಗೆ ಅವನೇ ದಗಾಕೋರ ಎಂಬುದು ಖಚಿತವಾಗಿರಬಹುದು.

—ಬಿಷಪ್ ಜಾರ್ಜ್ ಬರ್ಕ್ಲಿ

- ಚಿಂತೆ ಎಂಬುದು ಸಾಹಸಿಗೆ ತರವಲ್ಲ.

—ಕುವೆಂಪು

- ಹೃತ್ಪೂರ್ವಕವಾಗಿ ಪ್ರೀತಿಸದಿದ್ದರೂ ಒಳ್ಳೆಯ ಹೆಂಡತಿಯಾಗಬಹುದು.

—ರವೀಂದ್ರನಾಥ ಟ್ಯಾಗೋರ್